Impact Factor (SJIF): 6.092 E-ISSN: 2583-1615

International Journal of Research in Academic World

Received: 20/May/2023 IJRAW: 2023; 2(6):115-117 Accepted: 24/June/2023

# ವಚನಗಳಲ್ಲಿ ಕೃಷಿ ಪರಿಕಲ್ಪನೆ

**[*1]ಶ್ರೀ ಬಾಬು ಅ. ಬೆಣ್ಣಿ**

[*1]ಕನ್ನಡ ಉಪನ್ಯಾಸಕರು, ಕೆ.ಎಲ್.ಇ. ಸಂಸ್ಥೆಯ, ಶ್ರೀ ಮೃತ್ಯುಂಜಯ ಕಲಾ ಮತು ವಾಣಿಜ್ಯ ಮಾಹಾವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ,

**ಅಮೂರ್ತ**

'ಕೃಷಿ ತೋ ನಾಸ್ತಿ ದುರ್ಭಿಕ್ಷಂ' ಎನ್ನುವ ಮಾತಿನಂತೆ ಕೃಷಿ ನಂಬಿದರೆ ಅದು ಎಂದಿಗೂ ಕೈಬಿಡುವುದಿಲ್ಲ. ಕೃಷಿ ಒಂದು ಕಾಮದೇನು ಮತ್ತು ಕಲ್ಪವೃಕ್ಷವಿದ್ದಂತೆ. ಮಹತ್ವ ಅರಿತು ಕೃಷಿಯಲ್ಲಿ ತೊಡಗಿಕೊಂಡರೆ ಯಶಸ್ಸು ಖಂಡಿತ ಎಂದು ವಚನ ಸಾಹಿತ್ಯದ ಮೂಲಕ ಹನ್ನೆರಡನೆಯ ಶತಮಾನದ ಬಸವಾದಿ ಶರಣರು ನುಡಿದ್ದಿದ್ದಾರೆ. ರೈತನ ಪರಿಶ್ರಮದ ಬಗ್ಗೆ ಹೇಳಲು ಪದಗಳೇ ಸಾಲುವುದಿಲ್ಲ. ನಿಶ್ಚಲತೆಯಿಂದ ತಲೆದಿಂಬಿಗೆ ತಲೆ ಇಟ್ಟ ಕ್ಷಣ ನಿದ್ದೆಗೆ ಜಾರುವ ಭೂಮಿಯ ಮೇಲಿರುವ ಏಕೈಕ ವ್ಯಕ್ತಿ ಎಂದರೆ ಆತನೇ ರೈತ. ಬಸವಣ್ಣನವರು ಹೇಳಿದಂತೆ 'ಕಾಯಕವೇ ಕೈಲಾಸ' ಎಂಬುದು ಅದ್ಭುತ ವಿಚಾರ, ಯಾವತ್ತಿಗೂ ರೈತ ಗೌರವ, ಸನ್ಮಾನ, ಪ್ರಶಸ್ತಿ, ಮನ್ನಣೆ ಮುಂತಾದವುಗಳಿಗೆ ಎಂದಿಗೂ ಕೈಚಾಚುವುದಿಲ್ಲ ಅದು ಅವನ ದೊಡ್ಡ ಗುಣ. ಜೀವನಾನುಭವಕ್ಕೆ ಅತಿ ಹತ್ತಿರವಾದ ವಚನ ಸಾಹಿತ್ಯದಲ್ಲಿ ಜನಸಾಮಾನ್ಯರ ಮುಖ್ಯ ಜೀವನ ಮಾರ್ಗವಾದ ಕೃಷಿಗೆ ಸಂಬಂಧಪಟ್ಟ ವಿಚಾರಗಳು ಗಂಭೀರ ಚಿಂತನೆಗೆ ಒಳಪಟ್ಟಿರುವವವುದನ್ನು ವಚನಗಳ ಹಿನ್ನಲೆಯಲ್ಲಿ ಪರಿಶೀಲನೆಗೆ ಒಳಪಡಿಸಲಾಗಿದೆ.

**ಮುಖ್ಯ ಅಂಶಗಳು:** ಸಿದ್ಧರಾಮನ ವಚನ, ಅಲ್ಲಮಪ್ರಭು ವಚನ, ಸೊಡ್ಡಳ ಬಾಚರಸ ವಚನ, ಒಕ್ಕಲಿಗ ಮುದ್ದಣ್ಣ ವಚನ, ಚೆನ್ನಬಸವಣ್ಣ ವಚನ

**ಪ್ರಸ್ತಾವನೆ**

ಎಲ್ಲ ಕಾಯಕಗಳಿಗೂ ಮತ್ತು ಸಂಸ್ಕೃತಿಗಳಿಗೂ ತಾಯಿಯ ಸ್ಥಾನದಲ್ಲಿದ್ದು ಅಲಂಕರಿಸಲ್ಪಡುವುದೇ ಈ ಕೃಷಿ. ಕೃಷಿ ತಜ್ಞರಾದ ಗ್ರೆಗೋರಿ ಝಿನೋವಿಯೇವ್ ಮತ್ತು ಲೇವ್ ಕಾಮನೇವ್ ಅವರುಗಳು ಹೇಳಿದ್ದನ್ನು ಹನ್ನೆರಡನೆಯ ಶತಮಾನದಲ್ಲಿಯೇ ಬಸವಣ್ಣನವರು ಹೇಳಿದ್ದಾರೆಂದರೆ, ಆರ್ಥಿಕ ಇತಿಹಾಸ ಚರಿತ್ರೆಯಲ್ಲಿ ಸುವರ್ಣವಕಾಶಗಳಿಂದ ಬರೆಯುವಂತಹ ಚಿಂತನೆಯಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಅಂದಿನ ರಾಜ್ಯ ಸುಂಕದ ಹೆಚ್ಚಿನ ತೆರೆಗೆಯನ್ನು ಕೇಳಿದಾಗ ಅದನ್ನು ಬಹಿಷ್ಕರಿಸಿ ಪ್ರತಿಭಟನೆಯನ್ನು ಸಾರಿದ ಶರಣರು; ರೈತ ಚಳುವಳಿಯ ಶ್ರೇಷ್ಠ ಆದ್ಯ ಪ್ರವರ್ತಕರೆಂದು ಕರೆದರೆ ತಪ್ಪಾಗಲಾರದು. ಹಣ, ಅಂತಸ್ತು, ಆಸ್ತಿ, ಆಶ್ವರ್ಯ ಸಂಗ್ರಹಣೆ ಶರಣರ ಆದರ್ಶ ಗುರಿಯಿಲ್ಲದಿದ್ದರೂ, ಕೃಷಿ ಅಥವಾ ಅನ್ಯಕಾಯಕದಿಂದ ಬಂದ ಸಂಪತ್ತನ್ನು ಆ ದಿನ ಬೇಕಾದಷ್ಟೆ ಉಪಯೋಗಿಸಿ ಉಳಿದಿದ್ದನ್ನು ದಾಸೋಹಕ್ಕೆ ನೀಡುವುದು ಅವರ ಮೌಲ್ಯಯುತ ಸಿದ್ಧಾಂತಕ್ಕೆ ಸಾಕ್ಷಿ. ಶರಣರು ಅರಸೊತ್ತಿಗೆಯ ದಬ್ಬಾಳಿಕೆಯನ್ನು ಒಪ್ಪಿ ಸಹಿಸಿಕೊಳ್ಳುವುದಿಲ್ಲ. ಈ ಆತ್ಮ ಗೌರವವೇ ಅವರ ಪ್ರಗತಿಪರ ನಿಲುವಿನ ಹೆಗ್ಗುರುತುಗಳು, ಕೃಷಿ ಕಾಯಕದಲ್ಲಿ ಕಷ್ಟ-ಸುಖಗಳಿಗೆ ಸಮಾನವಾಗಿ ಜೀವನವನ್ನು ಸಾಗಿಸಿದರು. ಇದರಲ್ಲಿ ಅತ್ಯಂತ ಮಾರ್ಮಿಕವಾಗಿ ಕೃಷಿ ಕಾಯಕ ಶ್ರೇಷ್ಠತೆಯ ಬಗೆ ಸುಂದರವಾಗಿ ಮನಸ್ಸಿಗೆ ಮುಟ್ಟುವಂತೆ ತಿಳಿಸಿದ್ದಾರೆ. ಶರಣರು ಸಾಂದ್ರವಾದ ವಚನ ರಚನೆಯಲ್ಲಿ ಬಾಹ್ಯದ ಬೇಸಾಯದೊಂದಿಗೆ ಅಂತರಂಗದ ಕೃಷಿಯು ಹಾಸು ಹೊಕ್ಕಾಗಿದೆ.

ಶರಣರಲ್ಲಿ ಒಕ್ಕಲಿಗ ಮುದ್ದಣ್ಣ, ಅಜಗಣ್ಣ, ಏಲೇಶ್ವರ ಕೇತಯ್ಯ, ಈಳಿಹಾಳ ಬೊಮ್ಮಯ್ಯ, ಬಡಿಹೊರಿ ಬ್ರಹ್ಮಯ್ಯ ಇವರೆಲ್ಲಾ ಕೃಷಿಕರೆ ಆಗಿದ್ದರು. ಬಾಹೂರ ಬೊಮ್ಮಣ್ಣ, ನೀಲಕಂಠಯ್ಯ ಇವರು ತೋಟಗಾರಿಕೆಯ ಕೃಷಿ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಅಕ್ಕಮ್ಮ, ರೆಮ್ಮವ್ವೆ, ಮುಕ್ತಾಯಕ್ಕ ಈ ಮೊದಲಾದ ಶರಣೆಯರು ಕೃಷಿ ಕಾಯಕದವರಾಗಿದ್ದರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಸಿದ್ಧರಾಮೇಶ್ವರನು ತನ್ನ ವಚನವೊಂದರಲ್ಲಿ ಕೃಷಿಕನನ್ನು 'ಕೃಷೀವಲ' ನೆಂದು ಕರೆದಿದ್ದಾನೆ. (ವ. ೧೩೧) 'ಒಲೆಯಕಾರ ಭಕ್ತನಾದರೆ ಅವನ ಪೂರ್ವಾಶ್ರಯ ಬಿಡದು' (ವ. ೧೬೦) ಎಂದು ಚೆನ್ನಬಸವಣ್ಣ ಹೇಳಿದ್ದಾನೆ. ಒಕ್ಕಲಿಗ ವೃತ್ತಿಯ ವಚನಕಾರರು ಬರುವುದಕ್ಕಿಂತ ಮೂದಲೇ ಇತ್ತು. ಆದರೆ ಅದು ಪೂರ್ವಾಶ್ರಮದಿಂದ ಬಿಡುಗಡೆ ಹೊಂದಿರಲಿಲ್ಲ. ಶರಣರು ಒಕ್ಕಲಿಗ ವೃತ್ತಿಯನ್ನು ಕೃಷಿಕಾಯಕವನ್ನಾಗಿ ಮಾಡಿದರು. ಆಗ ಅದು ಪೂರ್ವಾಶ್ರಮದಿಂದ ಮುಕ್ತವಾಯಿತು.

> 'ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ
> ವಿಶ್ವಾಸವೆಂಬ ಬತ್ತ ಬಲಿದು ಉಂಡು
> ಸುಖಿಯಾಗಿರಬೇಕೆಂದ ಕಾಮ ಭೀಮ
> ಜೀವಧನದೊಡೆಯ' [೧]

ಸ್ವತಃ ಕೃಷಿ ಕಾಯಕ ಶರಣನಾದ ಒಕ್ಕಲಿಗ ಮುದ್ದಣ ಈ ವಚನ ಹೇಳುವಲ್ಲಿ ಅನುಭವ ಜನ್ಯವಾದ ಶರಣ ಪ್ರಜ್ಞೆ ಎದ್ದು ಕಾಣುತ್ತದೆ. ಅಂಗ-ಭೂಮಿ, ಲಿಂಗ-ಬೆಳೆಗಳು, ಐಹಿಕ ಲೋಕದ ಸಂಗತಿಗಳು, ಪ್ರಾಪಂಚಿಕ ಬದುಕಿನಲ್ಲಿ ಅವು ದ್ರವ್ಯ ಮಾತ್ರ ಆದರೆ ಇಲ್ಲಿ ಅಂಗ-ಭೂಮಿ, ಲಿಂಗ-ಬೆಳೆ ಎಂಬ ಕೃಷಿ ಕಾಯಕದ ಸಹಚರ್ಯದ ನುಡಿಗಟ್ಟುಗಳಾಗಿ ಪ್ರಸ್ತಾಪವಾಗುವ ಅರ್ಥ ಸಿರಿವಂತಿಕೆ ಮನಸ್ಸಿನಲ್ಲಿ

*Corresponding Author: ²æÃ ¨Á§Ä C. ¨ÉtÂÚ

ನಾಟಿ ನಿಲ್ಲುತ್ತದೆ. ಶರಣರು ಹೇಳುವ ಕೃಷಿಕಾಯಕದ ಲಿಂಗಾಂಗ ಸಾಮರಸ್ಯದ ಧ್ವನಿ ಇಲ್ಲಿ ಮನನೀಯವಾಗಿದೆ ಎಂದರೆ ತಪ್ಪಾಗಲಾರದು.

‘ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ,
ಅಗೆದು ಕಳೆದನಯ್ಯಾ ಭ್ರಾಂತಿನ ಬೇರ
ಒಡೆದು ಸಂಸಾರದ ಹೆಂಟೆಯ ಬಗೆದು
ಬಿತ್ತಿದೆನಯ್ಯಾ ಬ್ರಹ್ಮಬೀಜವ
ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ
ಸುಷುಮ್ನ ನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸೆಗೆಡಿಸಿಹವೆಚಿದು
ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲುಹಿದೆನು ಕಾಣಾ ಗುಹೇಶ್ವರಾ’ [೨]

ಕೃಷಿ ಪರಿಸರದ ಪಾರಿಭಾಷಿಕ ಪದಗಳ ಮುಖಾಂತರ ತಮ್ಮ ವಿಚಾರಧಾರೆಯನ್ನು ಮನೋಜ್ಞವಾಗಿ ಪ್ರಸ್ತಾಪಿಸಿದ್ದಾರೆ. ಅಲ್ಲಮನ ಈ ವಚನ ಕೃಷಿ ಪರಿಸರ ವ್ಯವಸ್ಥೆ, ಮನುಷ್ಯ ಜೀವನ, ಶರೀರ–ಆತ್ಮವನ್ನು ಒಂದು ನೂಲಿನಲ್ಲಿ ಸಮೀಕರಿಸಿದ್ದಾಗಿದೆ. ಮಾನವ ಶರೀರ ಹಾಗೂ ಬದುಕು ಕೂಡ ಕೃಷಿ ಪರಿಕರಗಳಿಗೆ ಸಂಬಂಧಿಸಿದ ಹಾಗೇ ಅವಿನಾಭಾವ ಸಂಬಂಧ ಹೊಂದಿವೆ. ಶರೀರ ಬದುಕನ್ನು ಪ್ರೀತಿಸಿದ ಹಾಗೇ ಕೃಷಿಯನ್ನು ಪ್ರಿತಿಸುವ, ಸ್ವಿಕರಿಸುವ ಬಗೆಯನ್ನು ಅಲ್ಲಮ ಗೊಗ್ಗಯ್ಯನೆಂಬ ಶರಣನಿಗೆ ಜೀವನ ಸಾಕ್ಷಾತ್ಕಾರದ ಮಾರ್ಗದರ್ಶನ ಮಾಡುತ್ತ ಹೇಳಿದ ವಚನ ಇದಾಗಿದೆ.

ಕೃಷಿ ಯಾವುದೇ ಪ್ರಮಾಣದಲ್ಲಿ ಇರಲಿ ಅದು ಪ್ರಕೃತಿಯ ವರವಾಗಿ ಪರಿಣಮಿಸುತ್ತದೆ. ಇಲ್ಲಿ ವ್ಯವಸಾಯದ ಕ್ರಮಗಳನ್ನು ಹೇಳುತ್ತಾ ಅಲ್ಲಮ ಮನುಷ್ಯನ ಮನೋಧರ್ಮದಲ್ಲಾಗಬೇಕಾದ ಪರಿವರ್ತನೆಗಳನ್ನು ಪ್ರತಿಪಾದಿಸುತ್ತಾನೆ. ಭೂಮಿಯನ್ನು ಉಳುಮೆ ಮಾಡುವಂತೆ ಮನಸ್ಸು ಸೂಕ್ತ ಉಪಕರಣಗಳಿಂದ ಅಗೆದು, ಹರಗಿ, ಸಮತಟ್ಟು ಮಾಡಿ ಉಳುಮೆ ಮಾಡಬೇಕಾಗಿದೆ. ನಮ್ಮಲ್ಲಿರುವ ಭ್ರಮೆ, ಭ್ರಾಂತಿಯೆಂಬ ಕಳೆಯನ್ನು ಬೇರು ಸಮೇತ ಕಿತ್ತೊಗೆಯಬೇಕಾಗಿದೆ. ಈ ಪ್ರಾಪಂಚಿಕ ಬದುಕೆಂಬ ಹೆಂಟೆಗಳ ರಾಶಿಯಿದ್ದಂತೆ; ಅದೂ ಎರೆ ಭೂಮಿಯನ್ನು ಆಳವಾಗಿ ಉಳಿದಾಗ ಬೀಳುವ ಮಣ ಭಾರದ ಹೆಂಟೆಗಳು. ಅವುಗಳ ಮೇಲೆ ನಡೆದುಕೊಂಡು ಹೋಗುವ ಪರಿಯನ್ನು ನೆನೆದರೆ ಆ ದುರ್ಗಮತೆ ಅರಿವ ಬಂದೀತು. ಅಂತಹ ಅಡೆತಡೆಗಳನ್ನು ಒಡೆದು, ಹುಡಿಮಾಡಿ ನೆಲವನ್ನು ಹದಗೊಳಿಸಿ ಬೀಜ ಬಿತ್ತಿದಂತೆ ವೈಚಾರಿಕತೆಯನ್ನು ಬಿತ್ತಬೇಕು; ಮನದಲ್ಲಿ ಜ್ಞಾನವೆಂಬ ಬೀಜವನ್ನ ಬಿತ್ತಬೇಕು ಬೆಳೆಯ ಸಂದಿಗ್ಧ ಹಂತದಲ್ಲಿ ನೀರನ್ನೊದಗಿಸುವ ಬಾವಿ ಇಡೀ ಭೊಮಂಡಲವನ್ನೇ ವ್ಯಾಪಿಸಿದೆ. ಅದು ನೀರಿನ ಚಕ್ರದಲ್ಲಿ ಒಂದಾಗಿ ಸೇರಿಹೋಗಿದೆ. ಭೂಮಿಗೂ ಆಕಾಶಕ್ಕೂ ಮಧ್ಯದಲ್ಲಿರುವ ವಾತಾವರಣದಾದ್ಯಂತ ಅಣುವಿನ ರೂಪದಲ್ಲಿ ಗಾಳಿಯೊಂದಿಗೆ ಗಾಳಿಯಾಗಿ ಪಸರಿಸಿಕೊಂಡಿದೆ. ಆ ಪವನವೇ ನೀರನ್ನು ಎತ್ತಿಕೊಡುವ ರಾಚಾಳದಂತೆ ಕೆಲಸ ಮಾಡುತ್ತದೆ. ಇಡಾ, ಪಿಂಗಳ, ಸುಷುಮ್ನನಾಳದ ಮುಖಾಂತರ ನೀರನ್ನು ಹರಿಸಬೇಕಾಗಿದೆ. ಜೀವ ಜಲವಾದ ನೀರು ತನ್ನಲ್ಲಿ ನಾನಾ ಬಗೆಯ ಸತ್ವಾಂಶಗಳನ್ನು ಅರಗಿಸಿಕೊಂಡು ಪ್ರತಿಹಂತದ ಬೆಳವಣಿಗೆಗೆ ಕಾರಣವಾಗುತ್ತದೆ. ಹೀಗೆ ಹಚ್ಚಹಸುರಾಗಿ ಬೆಳೆದು ನಿಂತ ಬೆಳೆಯನ್ನು ಹೊಕ್ಕು ಮೇಯಲು ಸುತ್ತಮುತ್ತಲ ತುಡುಗುಣಿಗಳು ಕಾಯುತ್ತಿವೆ. ಅವುಗಳಿಂದ ಬೆಳೆಯನ್ನು ರಕ್ಷಿಸಿಕೊಳ್ಳಲು ಸಮತೆ ಸೈರಣೆಗಳೆಂಬ ಬೇಲಿಗಳನ್ನು ಕಟ್ಟಬೇಕಾಗಿದೆ. ಆಂತರಿಕ ಪ್ರಜ್ಞೆಯಾಗಿ ಸದಾಕಾಲ ಜಾಗೃತವಾಗಿದ್ದು ಮನದ ಸಸಿಯನ್ನು ಸಲುಹಬೇಕಾಗಿದೆ.

‘ಹದನರಿದು ಹರಗುವ, ಬೆದೆಯರಿದು ಬಿತ್ತುವ,
ಸಸಿ ಮಂದವಾದರೆ ತೆಗೆವನಯ್ಯಾ,
ಒಂದೊಂದು ಹೊಕ್ಕು ಬೆಳವಸಿಯ ತೆನೆ ಮೆಲುವನಯ್ಯಾ,
ಕೊಯಿವನಯ್ಯಾ, ಕೊರೆವನಯ್ಯಾ,
ಒಕ್ಕೊವೆನಯ್ಯಾ, ತೂರುವೆನಯ್ಯಾ ಲೋಕಾದಿ
ಲೋಕಂಗಳ ಹಗೆಯನಿಕ್ಕುವನಯ್ಯಾ ದೇವರಾಯ ಸೊಡ್ಡಳ.’ [೩]

ಈ ವಚನದಲ್ಲಿ ಸೊಡ್ಡಳ ಬಾಚರಸನು ಕೃಷಿಕಾಯಕದ ವಿನ್ಯಾಸ ಹೇಗಿರುತ್ತದೆಂಬುದನ್ನು ವಿವರಿಸಿದ್ದಾನೆ. ಹೊಲವನ್ನು ಹರಗಬೇಕಾದರೆ, ಭೂಮಿ ಹದಗೊಂಡಿರಬೇಕು ಆಗ ಮಾತ್ರ ಹರಗಲು ಸಾಧ್ಯವಾಗುತ್ತದೆ. ಅದೇ ರೀತಿ ಬೀಜಗಳನ್ನು ಬಿತ್ತಬೇಕಾದರೆ ಭೂಮಿ ಬೆದಗೊಂಡಿರಬೇಕು. ಆಗ ಮಾತ್ರ ಬೀಜಗಳು ಅಂಕುರಿಸಿ ಹುಟ್ಟಿಕೊಳ್ಳುತ್ತವೆ. ಹೀಗೆ ಬೀಜವು ಭೂಮಿಯಲ್ಲಿ ಬಿದ್ದು ಸಸಿಯಾಗಿ ಬೆಳೆದು, ತೆನೆಬಿಟ್ಟು, ಕೊಯ್ಲು ಬರುತ್ತದೆ. ಆಗ ಕೊಯ್ಯುವ, ಕೊರೆವ, ಒಕ್ಕುವ, ತೂರುವ ಕಾರ್ಯಗಳು ಪ್ರಾರಂಭವಾಗುತ್ತವೆ. ಎಲ್ಲ ವೈರತ್ವವನ್ನು ಮರೆತು ಎಲ್ಲರಿಗೂ ಅನ್ನ ನೀಡುವ ರೈತ ನಿಜವಾದ ದೇವಮಾನವನಾಗಿದ್ದಾನೆ. ಇಂತಹ ದೇವ ಮಾನವನನ್ನು ಶರಣರು ಅತ್ಯಂತ ಗೌರವದಿಂದ ಕಂಡಿದ್ದಾರೆ. ಆತ ಮಾಡುವ ಕೃಷಿಕಾಯಕವನ್ನು ಪೂಜ್ಯತೆಯಿಂದ ನೋಡಿದ್ದಾರೆ.

“ನೀ ಕೊಟ್ಟ ಭೂಮಿಗೆ ಮುಂದೆ ಕರಲು,
ಹಿಂದೆ ಇಗ್ಗರಲು ಅಲ್ಲಿಂದ ಆಚೆ ಮಧ್ಯಭೂಮಿ,
ಮೂರು ನೆಲದ ಭೂಮಿಯ ಆರ್ಯೆದು ಬೆಳದಿಹೆನೆಂದಡೆ
ಇದಾರ ವಶವೂ ಅಲ್ಲ, ಕಾಲ ಭೀಮ ಜೀವ ಧನದೊಡೆಯ
ನೀನೆಬಲ್ಲೆ.” [೪]

ಒಕ್ಕಲಿಗ ಮುದ್ದಣ್ಣನು ಈ ವಚನದಲ್ಲಿ ಭೂಮಿಯ ಲಕ್ಷಣವನು ಹೇಳಿದ್ದಾನೆ. ಭೂಮಿ ಒಂದೇ ರೀತಿಯಾಗಿರುವುದಿಲ್ಲ. ತಗ್ಗು, ತೆಂಬ, ಕರಲು, ಕೊರಕಲು ಇದ್ದೇ ಇರುತ್ತದೆ. ಸಮತಟ್ಟಾದ ಫಲವತ್ತಾದ ಭೂಮಿ ಸಿಗುವುದು ವಿರಳ. ಕೃಷಿ ಕಾಯಕದಿಂದ ಹೀಗೆ ತಗ್ಗು–ತೆಂಬದಿಂದ ಕೂಡಿದ ಭೂಮಿಯನ್ನು ಸಮತಟ್ಟಾಗಿ ಮಾಡಬಹುದು. ಬಂಜರು ಭೂಮಿಯನ್ನು ಫಲವತ್ತಾದ ಭೂಮಿಯನ್ನಾಗಿ ಮಾಡಬಹುದು. ಈ ಬದಲಾವಣೆ ಕೃಷಿಕಾಯಕದಿಂದ ಮಾತ್ರ ಸಾಧ್ಯವಾಗುತ್ತದೆಂದು ಈ ಶರಣ ಹೇಳಿದ್ದಾನೆ. ಕೃಷಿ ಕಾಯಕದ ಈ ವ್ಯವಸಾಯವನ್ನು ಮುದ್ದಣ್ಣ ಆಧ್ಯಾತ್ಮದ ಪರಿಭಾಷೆಯಲ್ಲಿ ವಿವರಿಸಿದ್ದಾನೆ. ಭೂಮಿಯಲ್ಲಿಯೂ ಕೂಡ ಸಮತಟ್ಟು ಸಮಾನ ಅಳತೆಯಿಲ್ಲ. ಆದೇ ರೀತಿ ಜೀವಿಗಳಲ್ಲಿಯೂ ಕೂಡ ಒಂದೇ ರೀತಿಯಿಲ್ಲ. ಭೂಮಿಯನ್ನು ಸಮತಟ್ಟು ಮಾಡಿಕೊಳ್ಳಲು, ಜನಸಮುದಾಯದಲ್ಲಿ ಸಮಾನತೆಯನ್ನು ಹುಟ್ಟು ಹಾಕಲು ಕಾಯಕ ಹೇಗೆ ಮುಖ್ಯವಾಗುತ್ತದೆಂಬುದನ್ನು ಶರಣರು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ.

ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ ಕಿತ್ತಿ ಕಿತ್ತಿ ಮತೆ ಬಿತ್ತುತ್ತ ಹೋದಡೆ,
ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು
ಬೆಳಸನೀವ ಪರಿಯಿನ್ನೆಂತೂ ಮರಳು ಮಾನವಾ?
ಗುರುವಿತ್ತ ಲಿಂಗವ ತೊರೆ ತೊರೆದು ಮರಳಿ ಮರಳಿ ಧರಸಿದಡೆ
ಆ ಇಷ್ಟಲಿಂಗವು ಅನಿಷ್ಟವ ಕಳೆದು
ಇಷ್ಟಾರ್ಥವನೀವ ಪರಿಯಿನ್ನೆಂತೊ?
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಮುಕ್ತಿಯನರಸುವಡೆ
ಅಂಗನಲ್ಲಿ ಹೆರೆಹಿಂಗದೆ ಲಿಂಗವ ಧರಿಸಬೇಕು.[೫]

ಚೆನ್ನಬಸವಣ್ಣ ಈ ವಚನದಲ್ಲಿ ಮನುಷ್ಯ ಲಿಂಗದಲ್ಲಿ ಇರಿಸಬೇಕಾದ ಅಚಲ ಶ್ರದ್ಧೆ ಎಷ್ಟು ಮುಖ್ಯವೆಂಬುದನ್ನು ಚೆನ್ನಬಸವಣ್ಣನಿಗಿಂತಲೂ ಹೆಚ್ಚು ಬಲಯುತವಾಗಿ ಬೇರೆ ಯಾರು ಹೇಳಬಲ್ಲರು? ಒಮ್ಮೆ ನೆಲದಲ್ಲಿ ಊರಿದ ಬೀಜವಿರಬಹುದು, ಸಸಿಯಿರಬಹುದು ಅಥವಾ ಸ್ವತಂತ್ರ ಸಸ್ಯವಾಗಿ ಬೆಳೆಯಬಹುದಾದ ಯಾವುದೇ ಭಾಗವಿರಬಹುದು, ಬಹಳ ಮುಖ್ಯವಾಗಿ ಅದಕ್ಕೊಂದು ಸ್ಥಿರತೆ ಬೇಕು. ಹದವಾದ ಮಣ್ಣಿನ ಸಂಪರ್ಕಕ್ಕೆ ಬಂದು, ನಿರಂತರ ಜೈವಿಕ ಚಟುವಟಿಕೆಗಳು ಕೋಶಕೋಶದಲ್ಲಿ ನಡೆಯಬೇಕು. ತಾತ್ಕಾಲಿಕವಾಗಿ ನಿಶ್ಚಲಗೊಂಡ ಜೀವ ಮತ್ತೊಂದು ಜೀವನ ಚಕ್ರದಲ್ಲಿ ತಿರುಗುವ ಶಕ್ತಿ ಸಾಮರ್ಥ್ಯವನ್ನು ಪಡೆಯಬೇಕು. ಜೀವ ಸ್ಫುರಿಸಲು ಸಜ್ಜುಗೊಂಡ ಸೂಕ್ತ ವಾತಾವರಣದಲ್ಲಿ ‘ಬಿತ್ತುವ’ ದೃಢತೆಯಿಂದ ಒಂದಾಗೇಕು. ಕ್ರಿಯಾಶೀಲತೆ ಜೊತೆಗೆ ಕ್ರಿಯಾ ಸ್ಥಿರತೆಯೂ ಮುಖ್ಯವಾಗುವ ವಿಶಿಷ್ಟ ಸಂದರ್ಭವಿದು. ಅದಕ್ಕೆ ಹೊರತಾಗಿ ಅದೇ ಬೀಜವನ್ನು ಕಿತ್ತು ಕಿತ್ತು ಎಲ್ಲೆಂದರಲ್ಲಿ ನೆಡುತ್ತ ಹೋದರೆ ಅದು ಬೇರು ಬಿಡುವುದಿಲ್ಲ. ಸಸಿಯಾಗಿ

ಬೆಳೆಯುವ ಯಾವ ಉದ್ದೇಶಕ್ಕಾಗಿ ಪ್ರಕೃತಿ ಬೀಜಕ್ಕೆ ಪಾತ್ರ ನೀಡಿದೆಯೋ ಆ ಉದ್ದೇಶಕ್ಕಾಗಿ ಪ್ರಕೃತಿ ಬೀಜಕ್ಕೆ ಪಾತ್ರ ನೀಡಿದೆಯೋ ಆ ಉದ್ದೇಶ ಈಡೇರಿಕೆಯಾಗದು.

## ಉಪಸಂಹಾರ

ವಚನಗಳಲ್ಲಿ ಪುರುಷ, ಮಹಿಳೆ, ವಿಜ್ಞಾನ, ಶಿಶು, ಪ್ರಾಣಿ, ಪಕ್ಷಿ, ಪ್ರಕೃತಿ ಮುಂತಾದವುಗಳೆಲ್ಲವನ್ನು ಅಂದಿನ ಶರಣ ವಚನಕಾರರು ತಮ್ಮ ಅನುಭವಗಳ ಮೂಲಕ ವಚನಗಳ ರೂಪದಲ್ಲಿ ನೀಡಿದ ಹಾಗೆ ಕೃಷಿಯನ್ನು ಕುರಿತು ಅನೇಕ ವಚನಕಾರರು ಹೇಳುವ ಮೂಲಕ ಕೃಷಿ ಮತ್ತು ಮಾನವ ಅರಿವಿನ ಮೂಲಕ ಅದನ್ನು ಅನುಭಾವವಾಗಿಸಲು ಪ್ರಯತ್ನಿಸಿರುವುದು ಅವಿಸ್ಮರಣೀಯ.

## ಉಲ್ಲೇಖ ಪಟ್ಟಿ

1. ಸಂಪೂರ್ಣ ವಚನ ಸಂಪುಟ-೧೦, ವಚನ ೧೨೬೯.
2. ಸಂಪೂರ್ಣ ವಚನ ಸಂಪುಟ-೨, ವಚನ ೧೨೩೧.
3. ಸಂಪೂರ್ಣ ವಚನ ಸಂಪುಟ-೯, ವಚನ ೮೨೬.
4. ಸಂಪೂರ್ಣ ವಚನ ಸಂಪುಟ-೬, ವಚನ ೧೭೪೨
5. ಸಂಪೂರ್ಣ ವಚನ ಸಂಪುಟ-೮, ವಚನ ೧೩೧೨.
6. ಸಂ. ಅಮರೇಶ ನುಗಡೋಣಿ, ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಂಗ ಕನ್ನಡ ವಿ.ವಿ. ಹಂಪಿ-೨೦೧೮.
7. ಡಾ. ಕಲಬುರ್ಗಿ ಎಂ.ಎಂ. ಸಂಕೀರ್ಣ ವಚನ ಸಂಪುಟ-೧, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೧೯೯೩.
8. ಡಾ. ಬಿ.ಆರ್. ಹಿರೇಮಠ, ಸಂಕೀರ್ಣ ವಚನ ಸಂಪುಟ-೪, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೧೯೯೩.
9. ಸಂ. ಡಾ. ಅಮರೇಶ ನುಗಡೋಣಿ, ಶೂನ್ಯ ಸಂಪಾದನನೆಗಳು, ಪ್ರಸಾರಂಗ ಕನ್ನಡ ವಿ.ವಿ. ಹಂಪಿ-೨೦೧೮.
10. ಅಂತರ್ಜಾಲ ಮಾಹಿತಿ
11. ಸಂ. ಡಾ. ಕಲಬುರ್ಗಿ ಎಂ.ಎಂ. ಬಸವಣ್ಣನವರ ವಚನ ಸಂಪುಟ ಕರ್ನಾಟಕ ಸರಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರ-೧೯